# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಹೆಚ್.ಎಂ ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದರವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1563

ಉತ್ತರ ದಿನಾಂಕ : 11.03.2022

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಜನವಸತಿಗಳಿಗೆ ನೀರು ಪೂರೈಸುವ ಜಲಜೀವ್ ಮಿಷನ್ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ; ಪ್ರಸ್ತುತ ರಾಜ್ಯದ ಎಷ್ಟು ಗ್ರಾಮಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಬಂದಿದೆ; ಬಂದಿದ್ದಲ್ಲಿ, ಅನುಷ್ಠಾನಗೊಂಡ ಗ್ರಾಮಗಳ ಮಾಹಿತಿ ಒದಗಿಸುವುದು; | ಕೇಂದ್ರ ಸರ್ಕಾರದ ಯೋಜನೆಯಾದ "ಜಲ ಜೀವನ್ ಮಿಷನ್" ಅಡಿಯಲ್ಲಿ ರಾಜ್ಯದಲ್ಲಿನ ಒಟ್ಟು 97.91ಲಕ್ಷ ಮನೆಗಳಲ್ಲಿ ನಳ ಸಂಪರ್ಕವನ್ನು ಕಲ್ಪಿಸಲು ಯೋಜಿಸಲಾಗಿದ್ದು ಇಲ್ಲಿಯವರೆಗೆ 46.32ಲಕ್ಷ ಮನೆಗಳಿಗೆ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗಿರುತ್ತದೆ.<br>ಪ್ರಸ್ತುತ ರಾಜ್ಯದಲ್ಲಿ 9570 ಗ್ರಾಮಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿದ್ದು, 3028 ಗ್ರಾಮಗಳಲ್ಲಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಜಲ ಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಜನವಸತಿಗಳಿಗೆ ಒಟ್ಟು 150 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ಮೂಲಕ ನೀರು ಪೂರೈಸಲು ಉದ್ದೇಶಿಸಲಾಗಿದ್ದು, ಅವುಗಳ ಪೈಕಿ 06 ಯೋಜನೆಗಳು ಭೌತಿಕವಾಗಿ ಪ್ರಗತಿಯಲ್ಲಿದ್ದು, 15 ಯೋಜನೆಗಳು ಟೆಂಡರ್ ಹಂತದಲ್ಲಿರುತ್ತವೆ. ಇನ್ನುಳಿದ 121 ಯೋಜನೆಗಳು ಆಡಳಿತಾತ್ಮಕ ಅನುಮೋದನೆಯ ಹಂತದಲ್ಲಿರುತ್ತವೆ. |
| ಆ) | ರಾಜ್ಯ ಸರ್ಕಾರ ಜಲ ಜೀವನ್ ಮಿಷನ್ ಯೋಜನೆಗೆ ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಹಾಗೂ ರಾಜ್ಯದಲ್ಲಿ ನಿಗದಿತ ವರ್ಷದೊಳಗೆ ಯೋಜನೆಯ ಕಾಮಗಾರಿ ಮುಕ್ತಾಯವಾಗಿದೆಯೇ; ಹಾಗಿದ್ದಲ್ಲಿ, ಇನ್ನೂ ಎಷ್ಟು ವರ್ಷಗಳಲ್ಲಿ ಯೋಜನೆ ಪೂರ್ಣಗೊಳ್ಳಿದೆ; | ಜಲ ಜೀವನ್ ಮಿಷನ್ ಯೋಜನೆಗೆ ಇದುವರೆವಿಗೂ (ಫೆಬ್ರವರಿ-2022 ಅಂತ್ಯಕ್ಕೆ) ಕೇಂದ್ರ ಮತ್ತು ರಾಜ್ಯದ ಪಾಲಿನ ರೂ.3646.06ಕೋಟಿ ಅನುದಾನ ವೆಚ್ಚ ಭರಿಸಲಾಗಿದೆ. ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯನ್ನು 2024ರೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಇ) | ಪೂರ್ಣ ಪ್ರಮಾಣದ ಯೋಜನೆ ಅನುಷ್ಠಾನಗೊಳ್ಳಲು ತಡವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕೈಗೊಂಡ ಕ್ರಮಗಳೇನು? | ಕಾಮಗಾರಿಯ ಅನುಷ್ಠಾನಕ್ಕೆ ಅವಶ್ಯಕವಾಗಿ ಬೇಕಾದ ಇತರೆ ಇಲಾಖೆಗಳ ಅನುಮತಿ ಪಡೆಯುವಲ್ಲಿ ವಿಳಂಬವಾಗುತ್ತಿದ್ದು, ರಾಜ್ಯಮಟ್ಟದಲ್ಲಿನ ಹಿರಿಯ ಅಧಿಕಾರಿಗಳು ಕಾಲಕಾಲಿಕವಾಗಿ ಸಭೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಯತ್ನಿಸಲಾಗುತ್ತಿದೆ. |

ಸಂ:ಗ್ರಾಕುನೀ&ನೈಇ 161 ಗ್ರಾನೀಸ(4)2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು